ಶ್ರೀ ಜೆ. ಹೆಚ್. ಪಟೇಲ್,—ಸ್ವಾಮಿ, ವಿದ್ಯುದ್ದೀಕರಣದ ಲೆಕ್ಕವನ್ನು ಕೇವಲ ಕಂಬಗಳನ್ನು ಹಾಕಿದ ಆಧಾರದಮೇಲೆಯೇ ನಾವು ಮಾಡುವುದಿಲ್ಲ. ಎಲ್ಲಿ ಕಂಟ್ಯಾಕ್ಟರ್‌ಗಳು ಕೆಲಸವನ್ನೇ ಮಾಡದೆ, ವಿದ್ಯುದ್ದೀಕರಣ ಮಾಡಿದ್ದೇವೆಂದು ಯಾರಾದರೂ ಕಂಟ್ಯಾಕ್ಟರ್‌ಗಳು ಹಣವನ್ನು ತೆಗೆದುಕೊಂಡಿದ್ದರೆ ಆ ಮಾಹಿತಿಯನ್ನು ನಮಗೆ ಮಾನ್ಯ ಸದಸ್ಯರು ಕೊಟ್ಟರೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಸಂಬಂಧ ಪಟ್ಟ ಕಂಟ್ರಾಕ್ಟರ್ ಅಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಆ ಕೆಲಸ ಆಗಿಲ್ಲದಿದ್ದರೆ ಅದನ್ನು ವಿದ್ಯುಚ್ಛಕ್ತಿ ಇಲಾಖೆಯಿಂದ ಮಾಡಿಸಿಕೊಡುತ್ತೇವೆ. ಇನ್ನು ಅವರು ತಮ್ಮ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳು ಹೊಸಗಿದೆಯೆಂದು ಹೇಳುತ್ತಿದ್ದಾರೆ. ಬಹುಶಃ ಹ್ಯಾಮೆಟ್ಸ್‌ನ್ನು ಏನಾದರೂ ಹೇಳುತ್ತಿದ್ದಾರೇನೋ ಗೊತ್ತಿಲ್ಲ. ನಮ್ಮ ಅಭಿಪ್ರಾಯದಲ್ಲಿ ಆ ಹಳ್ಳಿಗಳಲ್ಲದಿರಬಹುದು. ಮುಖ್ಯ ಹಳ್ಳಿಗ ಳಾಗಿದ್ದರೆ ಅವುಗಳ ಹೆಸರುಗಳನ್ನು ಮಾನ್ಯ ಸದಸ್ಯರು ತಿಳಿಸಲಿ.

ಇನ್ನು ಸಿರಸಿ ತಾಲ್ಲೂಕಿನ ೧೯೨ ಗಾಮಗಳ ಪೈಕಿ ೧೧೧ ಗ್ರಾಮಗಳಿಗೆ ವಿದ್ಯುದ್ದೀಕರಣ ಆಗಿದೆ. ಸಿದ್ದಾಪುರ ತಾಲ್ಲೂಕಿನಲ್ಲಿ ೧೫೭ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲಾಗಿದೆ. ಉಳಿದಿರತಕ್ಕ ಗ್ರಾಮಗಳಿಗೆ ೮೮-೮೯ನೇ ಸಾಲಿನೊಳಗೆ ವಿದ್ಯುದ್ದೀಕರಣ ಮಾಡಿಸಿಕೊಡುತ್ತೇವೆ. ಕೆಲವರ ಎನ್ನತಕ್ಕ ಹಳ್ಳಿಗೆ ಸಂಬಂಧಿಸಿದಂತೆ ಕಂಬವನ್ನೇ ಹಾಕಿಲ್ಲ, ಕರೆಂಟನ್ನು ಕೊಟ್ಟಿದ್ದೇವೆಂದು ಹೇಳ. ತ್ತಿದ್ದಾರೆಂದು ಹೇಳಿದರು, ಮಾನ್ಯ ಸದಸ್ಯರು ಅದರ ವಿವರವನ್ನು ಕಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಇದೇರೀತಿ ದೊಡ್ಡಮನೆಯು ಹೊನ್ನೇ ಬಿಡಾರಕ್ಕೆ ಸಂಬಂಧಪಟ್ಟಂಥ ವಿಚಾರವನ್ನೂ ಕೂಡ ಮಾನ್ಯ ಸದಸ್ಯರು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

೩೩ ಕೆ. ವಿ. ವಿದ್ಯುತ್ ಕೇಂದ್ರದ ಸ್ಥಾಪನೆ

೮೧ (೬೧)ಬಿ ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ೩೩ ಕೆ. ವಿ. ಸ್ಟೇಷನ್ ಸ್ಥಾಪಿಸುವ ನಿರ್ಣಯಕ್ಕೆ ಬಂದಿದ್ದಾರೆಯೆ?

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ಹಾಗೂ ಕೆಲಸ ಪ್ರಾರಂಭವಾಗಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಸಚಿವರು).—

ಅ) ಈ ವಿಷಯ ಪರಿಶೀಲನೆಯಲ್ಲಿದೆ.

ಆ) ಪೋಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸ್ವಾಮಿ, ಬೀಳಗಿ ತಾಲ್ಲೂಕಿನಲ್ಲಿರುವ ಗಲಗಲಿಯು ಕೃಷ್ಣಾ ನದಿ ದಂಡೆಯಲ್ಲಿದೆ. ಇಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ಪ್ರಾರಂಭ ಮಾಡಬೇಕಾಗಿದೆ. ೧೫ ಕಿಲೋಮೀಟರ್ ಪ್ರದೇಶದಲ್ಲಿ ಎಲ್ಲಿಯೂ ಅಲ್ಲಿ ಸ್ಥಳಾವಕಾಶ ಇಲ್ಲದಿರುವುದರಿಂದ ಕೆ.ಇ.ಬಿ. ನವರು ಒಂದು ಕಡೆ ೨ ಎಕರೆ ಜಾಗವನ್ನು ಈ ಉದ್ದೇಶಕ್ಕಾಗಿ ತಮ್ಮ ಸ್ವಾಧೀನಕ್ಕೆ ಪಡೆದುಕೊಂಡಿ ದ್ದಾರೆ. ಈಗ ಅಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಗಲಗಲಿ ಗ್ರಾಮವು ನಾನು ಭೂಪಟದಲ್ಲಿ ನೋಡಿರುವಂತೆ ಜಮಖಂಡಿ ಮತ್ತು ಬೀಳಗಿ ಇವುಗಳ ಮಧ್ಯೆ ಬರುತ್ತದೆ. ಈಗಾಗಲೇ ಜಮಖಂಡಿಯಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ೧೧೦ ಕೆ. ವಿ. ಸ್ಟೇಷನ್ ಆಗಿ ಪರಿವರ್ತನೆ ಮಾಡಲು ಅನುಮತಿ ನೀಡಿದೆ. ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಇನ್ನು ಗಲಗಲಿ ಯಲ್ಲಿ ಸ್ಟೇಷನ್ ಸ್ಥಾಪಿಸಬೇಕಾದರೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅಲ್ಲಿ ಇದರ ಅವಶ್ಯಕತೆ ಇದ್ದೇ ಇದೆ ಎಂದು ಕಂಡುಬಂದರೆ ೩೩ ಕೆ. ವಿ. ಸ್ಟೇಷನ್‌ನ್ನು ಸ್ಥಾಪಿಸಲು ಪ್ರಯತ್ನ ಮಾಡುತ್ತೇವೆ.

ನಿರ್ಬಂಧ ವಿದ್ಯುತ್ ಕೇಂದ್ರಗಳ ಮೂಲಕ ವಿದ್ಯುತ್ ಉತ್ಪಾದನೆ

೮೨ (೮೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿನ ಒಟ್ಟು ಪ್ರಮಾಣವೆಷ್ಟು ಮತ್ತು ಚಾಲ್ತಿ ಸಾಲಿನ ಬೇಡಿಕೆಯೆಷ್ಟು?

ಆ) ಮುಂದಿನ ೫ ವರ್ಷಗಳ ನಿರೀಕ್ಷಿತ ವಿದ್ಯುತ್ ಬೇಡಿಕೆ ಎಷ್ಟು ಮತ್ತು ಆ ವರ್ಷಗಳಲ್ಲಿನ ನಿರೀಕ್ಷಿತ ಕೊರತೆ ಎಷ್ಟು?

ಇ) ಈ ಸಾಲಿನಲ್ಲಿನ ನಿರೀಕ್ಷಿತ ವಿದ್ಯುಚ್ಛಕ್ತಿನ ಕೊರತೆ ಎಷ್ಟು?

ಈ) ಇದನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಉ) ರಾಜ್ಯದಲ್ಲಿ ಸ್ಥಾಪಿಸಬೇಕಾಗಿರುವ ಕ್ಯಾಪ್ಟೀವ್ ಪವರ್ ಸ್ಟೇಷನ್ನುಗಳ ಸಂಖ್ಯೆಯೆಷ್ಟು?

ಊ) ಈ ಕ್ಯಾಪ್ಟೀವ್ ಪವರ್ ಸ್ಟೇಷನ್ನುಗಳ ಒಟ್ಟು ಉತ್ಪಾದನಾ ಸಾಮರ್ಥ್ಯವೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೧೯೮೬–೮೭ನೇ ಸಾಲಿನ ಅಂದಾಜು ಉತ್ಪತ್ತಿ ೭೬೫೨ ಎಂ. ಯು.
ರಾಜ್ಯದ ಪಾಲನ್ನೊಳಗೊಂಡಂತೆ ನೆರೆರಾಜ್ಯಗಳಿಂದ ದೊರೆಯುವ ನೆರವು ೨೫೯೩ ಎಂ. ಯು.

ಒಟ್ಟು ೧೦೨೪೫ ಎಂ. ಯು.

ಬೇಡಿಕೆ ೧೨೪೯ ಎಂ. ಯು.

ಆ)

	ಮಿಲಿಯನ್ ಯೂನಿಟ್‌ಗಳಲ್ಲಿ				
ವರ್ಷಗಳು	೧೯೮೬–೮೭	೮೭–೮೮	೧೯೮೮–೮೯	೮೯–೯೦	೯೦–೯೫
ಬೇಡಿಕೆಗಳು	೧೪೩೩೦	೧೫೭೨೪	೧೭೨೬೩	೨೪೮೦೦	೨೬೪೦೦
ದೊರೆಯುವ ಪ್ರಮಾಣ	೧೨೨೬೭	೧೩೫೧೭	೧೪೬೦೫	೧೪೬೦೫	೧೪೬೦೫
ಕೊರತೆ	೨೦೬೩	೨೨೧೦	೨೬೪೮	೯೩೪೫	೧೧೭೪೫ (ಅಂದಾಜು)

ಇ) ೨೧೪೪ ಮಿಲಿಯನ್ ಯೂನಿಟ್‌ಗಳು.

ಈ) ಅಲ್ಪಕಾಲೀನ ಕ್ರಮಗಳು : (೧) ಗ್ರಾಮಾಂತರ ಕೈಗಾರಿಕೆಗಳಿಗೆ ಪ್ರೋತ್ಸಾಹ ಮತ್ತು ವಿದ್ಯುತ್ ಆಧಾರಿತ ಕೈಗಾರಿಕೆಗಳಿಗೆ ಪ್ರಾಶಸ್ತ್ಯ ನೀಡದಿರುವುದು. (೨) ಖಾಸಗಿಯವರಿಗೆ ಕ್ಯಾಪ್ಟೀವ್ ಜನರೇಟರುಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವುದು (೩) ಸರ್ಕಾರದ ಪಲಯದಲ್ಲಿ ಕ್ಯಾಪ್ಟೀವ್ ಜನರೇಟರುಗಳನ್ನು ಸ್ಥಾಪಿಸುವುದು.

ದೀರ್ಘಕಾಲೀನ ಕ್ರಮಗಳು : (೧) ವಿತರಣಾ ಪದ್ಧತಿಯ ಅಭಿವೃದ್ಧಿ (೨) ಕಾರ್ಯ ಹಂತದಲ್ಲಿರುವ ಯೋಜನೆಗಳ ಪೂರೈಕೆ ಮತ್ತು ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದು.

ಉ) ಇಲ್ಲ.

ಊ) ಇಲ್ಲ.

ಮಾನ್ಯ ಅಧ್ಯಕ್ಷರೆ, (ಅ) ಪ್ರಶ್ನೆಗೆ ಉತ್ತರ ನೀಡಿರುವುದರಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ಮಾಡಿಕೊಳ್ಳಬೇಕಾಗಿದೆ. ಮುಂದಿನ ೫ ವರ್ಷಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ೮೮–೮೯ನೇ ಸಾಲಿಗೆ ನಮಗೆ ಅವೇಲಬಿಲಿಟಿ ೧೨ ಸಾವಿರ ಮಿಲಿಯನ್ ಯೂನಿಟ್‌ಗಳು. ಪವರ್ ಕಟ್‌ನ್ನು ಇಂಪ್ಲೋಸ್ ಮಾಡಿದರೆ ನಮ್ಮ ರಾಜ್ಯದ ಬೇಡಿಕೆ ೧೫ ಸಾವಿರ ಮಿಲಿಯನ್ ಯೂನಿಟ್‌ಗಳು. ಪವರ್ ಕಟ್ ರಿಸ್ಟ್ರಿಕ್ಟ್ ಮಾಡಿದ್ದೇವೆ. ಮಾಡಿದ ಮೇಲೆ ಕೇಳತಕ್ಕಂಥದ್ದು ೧೨ ಸಾವಿರ ಮಿಲಿಯನ್.

ನಮ್ಮಲ್ಲಿರತಕ್ಕಂಥದ್ದು ೧೦ ಸಾವಿರ ಮಿಲಿಯನ್ ಯೂನಿಟ್ಸ್. ಈ ದೃಷ್ಟಿಯಿಂದ ಅನ್‌ರಿಸ್ಟ್ರಿಕ್ಟ್ ಡಿಮಾಂಡ್‌ಗೂ ಈಗಿರತಕ್ಕಂಥ ರಿಸ್ಟ್ರಿಕ್ಟ್ ಡಿಮಾಂಡ್‌ಗೂ ವ್ಯತ್ಯಾಸ ಬೀಳುತ್ತದೆ. ಅದನ್ನು ಮಾನ್ಯ ಸದಸ್ಯರು ಗಮನಿಸಬೇಕು. ೧೯೮೭-೮೮ಕ್ಕೆ ಬೇಡಿಕೆ ೧೫ ಸಾವಿರ ಮಿಲಿಯನ್ ಯೂನಿಟ್ಸ್. ೧೯೮೮ಕ್ಕೆ ಪ್ರೊಜೆಕ್ಷನ್ ೨೬,೨೭,೪೦೦ ಮಿಲಿಯನ್. ೧೯೨೨-೯೩ಕ್ಕೆ ಬೇಡಿಕೆ ಪ್ರೊಜೆಕ್ಷನ್ ಅವೇಲಬಿಲಿಟಿ ಫಿಗರ್ಸ್ ಏನು ಇದೆ ಅದನ್ನು ಆಕ್ಯುರೇಟ್ ಎಂದು ಹೇಳುವುದಕ್ಕೆ ಬರುವುದಿಲ್ಲ. Availability also depends upon our power generation is 95% all of them are hydel and it depends upon mansoon and storage of water. This availability can be calculated and some projections have been given but it may not be, That is why I would like the hon. Member to correct this. The deficiency between the demand and supply, the unrestricted demand without adding additional generation of power—This will be the figure...11,778 ೧೯೨೨-೯೩ನೇ ಇಸವಿಯಲ್ಲಿ ೧೧,೭೭೮ ಮಿಲಿಯನ್ ಯೂನಿಟ್ಸ್ ಕೊರತೆಯಾಗುತ್ತದೆ ಎಂದು ಹೇಳಿದ ಕೂಡಲೇ ತಪ್ಪಿಗೆ ಭಯಾನಕವಾಗಿ ಕಾಣಬಹುದು. ಮೂರನೆಯ ಪ್ರಶ್ನೆಗೆ ೨೧೪ ಮಿಲಿಯನ್ ಎಂದು ಹೇಳಿದರೆ ಗ್ರಾಮಾಂತರ ಕೈಗಾರಿಕೆಗಳಿಗೆ ವಿದ್ಯುತ್ ಪ್ರಾಶಸ್ತ್ಯ ನೀಡಬೇಕಾಗಿರುವುದರಿಂದ ಬಾಸಗಿ ಜನರಿಗೆ ಜನರೇಟಿಂಗ್‌ಗೆ ಪ್ರೋತ್ಸಾಹಿಸಬೇಕಾದರೆ ಸರ್ಕಾರಿ ವಲಯದಲ್ಲಿರುವ ದೀರ್ಘಕಾಲದ ಎಲ್ಲಾ ಇನ್ವೆಸ್ಟ್‌ಮೆಂಟ್‌ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಪ್ರಶ್ನೆ 'ಉ' ಮತ್ತು 'ಊ' ಗೆ ಮಾನ್ಯ ಸದಸ್ಯರಿಗೆ ಕೊಟ್ಟಿರತಕ್ಕಂಥ ಉತ್ತರದಲ್ಲಿ ನಾನು ಈಗ ಸರಿ ಮಾಡಿದ್ದೇನೆ. ಊ ಪ್ರಶ್ನೆಗೆ ಇಲ್ಲವೆಂದು ಹೇಳಿದ್ದೇನೆ. ಅದನ್ನು ಸರಿಮಾಡಿಕೊಳ್ಳಬೇಕು. ೩೫೫೭ ಸ್ಮಾಲ್ ಕ್ಯಾಪ್ಟಿವ್ ಜನರೇಟಿಂಗ್ ಯೂನಿಟ್ಸ್. ೧೫-೨೦ ಕಿಲೋವ್ಯಾಟ್ಸ್ ಉತ್ಪಾದನೆ ಮಾಡತಕ್ಕಂಥದ್ದು ೩೫೫೭ ಯೂನಿಟ್ಸು ಕೆಲಸ ಮಾಡುತ್ತಿವೆ. ೨೧೪ ಮೆಗಾವ್ಯಾಟ್ಸ್ ಪವರ್ Power generated by these captive generating units owned by private industrialists will be around 214 mwtt if all of them run to its full capacity.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ ಇನ್ನು ೫ ವರ್ಷ ಆದಮೇಲೆ ಅವರ ಲೆಕ್ಕಾಚಾರದ ಪ್ರಕಾರ ೧೧,೭೭೮ ಮೆಗಾವಾಟ್ ಕರೆಂಟ್ ಬೇಕಾಗುತ್ತದೆ. ಅದನ್ನು ನಾನುಒಪ್ಪಿಕೊಳ್ಳುತ್ತೇನೆ. ಈ ವರ್ಷದ ಲೆಕ್ಕದ ಪ್ರಕಾರ ೨೮೮೪ ಮಿಲಿಯನ್ ಯೂನಿಟ್ಸ್ ಡಿಫಿಸಿಟ್ ಇದೆ ಎಂದು ಹೇಳುತ್ತಾರೆ. ಆಲ್ಲದೆ ಕಾರ್ಯ ಹಂತದಲ್ಲಿರುವ ವಿದ್ಯುತ್ ಯೋಜನೆಗಳು ಇವೆ ಎಂದು ಹೇಳುತ್ತಾರೆ. ಅದರ ಪ್ರಕಾರ ಎಷ್ಟು ಉತ್ಪಾದಿಸಲು ಸಾಧ್ಯವಿದೆ ಮತ್ತು ಎಷ್ಟು ಡಿಫಿನೆಟ್ ಬರುತ್ತದೆ ? ವಿದ್ಯುತ್ ಯೋಜನೆ ಉಪಯೋಗದಿಂದ ಗ್ರಾಮೀಣ ಬದುಕು ಬದಲಾವಣೆಯಾಗುವ ಸಾಧ್ಯತೆ ಉಂಟು. ಕೈಗಾರಿಕಾ ಅಭಿವೃದ್ಧಿ ಆಗುತ್ತದೆ. ಎಂಪ್ಲಾಯಮೆಂಟ್ ಪೊಟೆನ್‌ಷಿಯಲ್ ಬರುತ್ತದೆ. ಅದು ಪೂರ್ತಿ ಕಡಿಮೆ ಆಗಿದೆ. ಇದರ ಬಗ್ಗೆ ಪಟೇಲರು ಹೆಚ್ಚು ಗಮನ ಕೊಡಬೇಕು. ವಿದ್ಯುತ್ ಸರಬರಾಜು ಇಲ್ಲವೆಂದು ಹೊಸೂರು, ಗೌರಿಬಿದನೂರು ಮುಂತಾದ ಕಡೆ ಬರಬೇಕಾದ ಎಲ್ಲಾ ಕೈಗಾರಿಕೆಗಳು ಆರ್ಡರ್ ಆಗಿ ಹೋಗುತ್ತಿವೆ. ಈ ಬಗ್ಗೆ ದೂರಾಲೋಚನೆ ಇದೆಯೇ ಇಲ್ಲವೆ ? ಇಲ್ಲದಿದ್ದರೆ ನಾವು ಬಹಳ ಸಫರ್ ಮಾಡಬೇಕಾಗುತ್ತದೆ. ಇಲ್ಲಿ ಪವರ್ ಕಟ್ ಆಗುತ್ತದೆ, ಪಳ್ಳಿಗಳಲ್ಲಿ ಪವರ್ ಇರುವುದೇ ಇಲ್ಲ. ಇದನ್ನು ಅಭಿವೃದ್ಧಿ ಮಾಡುತ್ತೀರಾ ? ಹೇಗೆ ಮಾಡುತ್ತೀರಿ?

ಶ್ರೀ ಜೆ. ಹೆಚ್. ಪಟೇಲ್.—ಹಾಗೆಯೇ ಬಿಡುವುದಿಲ್ಲ, ಅಭಿವೃದ್ಧಿ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ—ಕಾರ್ಯ ಹಂತದಲ್ಲಿರುವ ವಿದ್ಯುತ್ ಯೋಜನೆ ಯಿಂದ ಆಗುವ ಉತ್ಪಾದನೆ ಎಷ್ಟು ಎಂದು ಕೇಳಿದ್ದೇವೆ. ನನಗೆ ಜಾರಿಕೆ ಉತ್ತರ ಬೇಡ.

ಶ್ರೀ ಜೆ. ಹೆಚ್. ಪಟೇಲ್.—ಜನರೇಟಿಂಗ್ ಎಷ್ಟು, ಲಾಸ್ ಎಷ್ಟು ಎಂಬುದನ್ನೆಲ್ಲಾ ಈಗ ಹೇಳುವುದು ಕಷ್ಟವಾಗುತ್ತದೆ. ನಮ್ಮ ಕೈಯಲ್ಲಿರತಕ್ಕ ಯೋಜನೆಗಳು ಕಂಪ್ಲೀಟ್ ಆದರೆ ಅನುಕೂಲವಾಗುತ್ತದೆ. ೧೯೮೮-೮೯ರ ಹೊತ್ತಿಗೆ ಕಂಪ್ಲೀಟ್ ಆಗುವ ಒಂದೇ ಒಂದು ಪ್ರಾಜೆಕ್ಟ್ ವರಾಹಿ. ಆದರಿಂದ ಉತ್ಪಾದನೆಯಾಗುವ ಪವರ ೩೭೦ ಮೆಗಾವ್ಯಾಟ್. ರಾಯಚೂರಿನಲ್ಲಿ ಥರ್ಡ್ ಯೂನಿಟ್ಸ್ ಇದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆ. ಅದು ೧೯೯೦ರ ಹೊತ್ತಿಗೆ ಕಮಿಷನ್ ಆದರೆ ೨೧೦ ಮೆಗಾವ್ಯಾಟ್ ವಿದ್ಯುತ್ ನಮಗೆ ದೊರೆಯುತ್ತದೆ. ಒಟ್ಟು ೫೫-೬೦ ನೂರು ಮೆಗಾವ್ಯಾಟ್ ಆಡಿಷನ್ ಆದರೆ ನಮ್ಮ ಪ್ರೊಜೆಕ್ಷನ್ ಏನಿದೆ ಅದು ಕಡಿಮೆ ಆಗುತ್ತದೆ. ಕೊರತೆ ೧೧೭೭೫ ಮೆಗಾವ್ಯಾಟ್ ಎಂದು

ಏನಿದೆ ಅದು ಸ್ವಲ್ಪ ಕಡಿಮೆ ಆಗುತ್ತದೆ. ೬೦೦ ಮೆಗಾವ್ಯಾಟ್ ಅಂದರೆ ೨೫೦೦ ಮಿಲಿಯನ್ ಯೂನಿಟ್ಸ್. ಅಂದಾಗ ೨೫೦೦ ಮಿಲಿಯನ್ ಯೂನಿಟ್ಸ್ ಕಡಿಮೆ ಆಗುತ್ತದೆ. ಮಿಲಿಯನ್ ಯೂನಿಟ್ಸ್ ಅಂದರೆ ಅದರ ಕ್ವಾಂಟಂ, ಮೆಗಾವ್ಯಾಟ್ ಅಂದರೆ ಅದರ ಸ್ಟೆಂಗ್ತ್.

ಅಧ್ಯಕ್ಷರು.—ಮತ್ತೆ ತಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಂಗಳೂರಿನಲ್ಲಿ ಮತ್ತು ಕೋಲಾರದಲ್ಲಿ ಡೀಸಲ್ ಪವರ್ ಸ್ಟೇಷನ್‌ಗಳನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕೆ ಕೇಂದ್ರ ಸರ್ಕಾರದ ಪರವಾನಗಿ ಬೇಕು. ಅದು ಬಂದ ತಕ್ಷಣ ಮಾಡುತ್ತೇವೆ.

ಅಧ್ಯಕ್ಷರು.—ಈಗ ಮತ್ತೆ ಯಾರಿಗೂ ಅವಕಾಶ ಕೊಡುವುದಿಲ್ಲ. ಪ್ರಶ್ನೋತ್ತರ ವೇಳೆ ಒಂದು ತಾಸು ಇದೆ. ಈಗಾಗಲೇ ೨೦ ನಿಮಿಷವಾಯಿತು, ಇನ್ನೂ ನಾನು ೫ನೇ ಪ್ರಶ್ನೆ ಯಲ್ಲಿದ್ದೇವೆ. ಪ್ರಶ್ನೋತ್ತರ ವೇಳೆಯನ್ನು ಬೆಳಸಬೇಡಿ, ಬೇರೆಯದಕ್ಕೆ ಅವಕಾಶ ಕೊಡಿ ಎಂದು ಹೇಳುವವರು ನೀವೇ. ಆದರಿಂದ ಈಗ ಮತ್ತೆ ಯಾರಿಗೂ ಆ ಪ್ರಶ್ನೆ ಬಗ್ಗೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ. ಯಾರು ಪ್ರಶ್ನೆ ಹಾಕಿರುತ್ತಾರೆ ಅವರಿಗೆ ೨-೩ ಸಾರಿ ಅವಕಾಶ ಕೊಡುತ್ತೇನೆ. ದಯವಿಟ್ಟು ಎಲ್ಲರೂ ಸಹಕರಿಸಬೇಕು.

ಶ್ರೀ ಎಸ್. ಎಸ್. ಕಡಪಟ್ಟಿ.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ .....

ಅಧ್ಯಕ್ಷರು.—ಪ್ರಶ್ನೆ ಹಾಕಿದವರನ್ನು ಬಿಟ್ಟು ಬೇರೆಯವರು ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್. ಎಸ್. ಕಡಪಟ್ಟಿ.—ಇದನ್ನು ಅರ್ಧ ಗಂಟೆ ಚರ್ಚೆಗೆ ಅಲೋ ಮಾಡಿ. ಇದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು.— ಇಲ್ಲ. ಈಗಎಲ್ಲವು ಮುಖ್ಯವಾದವೇ ಆಗಿರುತ್ತವೆ.

ಗುಲ್ಬರ್ಗಾ ಜಿಲ್ಲೆಯಲ್ಲಿನ ಹಳ್ಳಿಗಳಿಗೆ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ದೀಪ ಒದಗಿಸುವ ಬಗ್ಗೆ

೮೩. (೧೦೩) ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗಾ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಗುಲ್ಬರ್ಗಾ ಜಿಲ್ಲೆಯ ಹಳ್ಳಿಗಳಲ್ಲಿ ೧೯೮೪-೮೫ ಮತ್ತು ೧೯೮೫-೮೬ರಲ್ಲಿ ಎಷ್ಟು ಲಂಬಾಣಿ ತಾಂಡಾಗಳಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಓಣಿಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಯಿತು. ಮತ್ತು ಎಷ್ಟು ಕುಟುಂಬಗಳಿಗೆ ಭಾಗ್ಯಜ್ಯೋತಿ ಯೋಜನೆಯಲ್ಲಿ ಅನುಕೂಲ ವಾಗಿದೆ?

ಆ) ವಿದ್ಯುಚ್ಛಕ್ತಿ ಸರಬರಾಜು ಆಗದ ಹಳ್ಳಿಗಳು ಮತ್ತು ತಾಂಡಾಗಳೆಷ್ಟು ಮತ್ತು ಅವುಗಳು ಎಂದು ಪೂರ್ತಿಗೊಳ್ಳುವುವು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ವಿದ್ಯುತ್ ಸರಬರಾಜು ಮಾಡಿರುವ ವಿವರಗಳು ಈ ಕೆಳಗೆ ಕಂಡಂತಿವೆ :—

ವಿವರ		೧೯೮೪-೮೫	೧೯೮೫-೮೬	೧೯೮೬-೮೭ (೧-೪-೮೬ರಿಂದ ೩೧-೧೨-೮೬ರ ವರೆಗೆ)
೧.	ಲಂಬಾಣಿ ತಾಂಡಾಗಳು	—	೪	೧೮
೨.	ಹರಿಜನ ಕೇರಿಗಳು	೧೨೫	೧೦೬	೬೨